## ಚೀನಿಕಾಯಿ ಬೀಜದ ಕಲಾಕೃತಿ

ಈ ಆರತಿ ತಟ್ಟೆ ಚೀನಿಕಾಯಿ ಬೀಜದಿಂದ ತಯಾರಿಸಿರುವುದು. ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಹಾರ್ಸಿಕಟ್ಟಾ ಬಳಿಯ ಹೊಸಕೊಪ್ಪ ಗ್ರಾಮದ ಮಹದೇವಿ ಗಣಪತಿ ಹೆಗಡೆಯವರು ಇದನ್ನು ತಯಾರಿಸಿದ್ದು. ಅವರಿಗೆ ಈಗ ವರ್ಷ 85. ಆದರೂ ಅವರು ಮನೆಯಲ್ಲಿ ಸುಮ್ಮನೆ ಕುಳಿತುಕೊಳ್ಳದೇ ಹತ್ತು ಹಲವು ಕಲಾಕೃತಿ ರಚಿಸುವುದರಲ್ಲಿ ಮಗ್ನರಾಗಿರುತ್ತಾರೆ. ಕಳೆದ 15 ವರ್ಷಗಳಿಂದ ಅವರು ವಿವಿಧ ವಸ್ತುಗಳನ್ನು ಬಳಸಿ ಮಂಗಲಕಾರ್ಯಗಳಿಗೆ ಬೇಕಾದ ವಸ್ತುಗಳನ್ನು, ಅಲಂಕಾರಿಕ ವಸ್ತುಗಳನ್ನು ಸಿದ್ಧಪಡಿಸುತ್ತಿದ್ದಾರೆ. ಭತ್ತ, ಹತ್ತಿ, ದಾರ, ಸೌತೆಬೀಜ, ಚೀನಿಕಾಯಿ ಬೀಜ, ಕಾಳುಮೆಣಸು, ಮಣಿ, ತೆಂಗಿನಚಿಪ್ಪು ಮುಂತಾದವುಗಳಿಂದ ವಿವಿಧ ವಿನ್ಯಾಸದ ಆರತಿ ತಟ್ಟೆಗಳು, ಬಿದಿರು ಹುಲ್ಲು, ಮರಳಿನಲ್ಲಿ ಈಶ್ವರಲಿಂಗ, ಹಳೆ ಬಟ್ಟೆಗಳಿಂದ ಹೂಗುಚ್ಛವನ್ನು ತಯಾರಿಸುತ್ತಾರೆ. ದೊಡ್ಡದಾದ ಇವರ ಮನೆಯೊಳಗೆ ಇವರು ಸಿದ್ಧಪಡಿಸಿದ ಕಲಾಕೃತಿಗಳೇ ತುಂಬಿಕೊಂಡಿವೆ. ಸುಮಾರು 250 ವಿವಿಧ ವಿನ್ಯಾಸಗಳ ಆರತಿ ತಟ್ಟೆಗಳು ಅವರ ಸಂಗ್ರಹದಲ್ಲಿವೆ.

**ಚಿತ್ರ- ಬರಹ:**
**ಗಣಪತಿ ಶಿರಳಗಿ, ಸಾಗರ**





## ಕೇಸರಿ ಬಣ್ಣದ ಅಣಬೆ

ಸಾಮಾನ್ಯವಾಗಿ ಬಿಳಿ ಬಣ್ಣದಲ್ಲಿ ಅಣಬೆ ಇರುತ್ತದೆ. ಆದರೆ ಇಲ್ಲೊಂದು ಅಣಬೆ ಕೇಸರಿ ಬಣ್ಣದಲ್ಲಿ ಕಂಗೊಳಿಸುತ್ತಿದೆ. ಕೇಸರಿ ಬಣ್ಣದ ಬಲೆ ಸುತ್ತಲೂ ಹರಡಿಕೊಂಡಿದ್ದು ಎಲ್ಲರನ್ನೂ ತನ್ನಡೆಗೆ ಆಕರ್ಷಣೆ ಮಾಡುತ್ತಿದೆ. ಬಲೆಯಲ್ಲಿರುವ ಕೊಂಡಿ ಒಂದಕ್ಕೊಂದು ಜೋಡಣೆಯಾಗಿದ್ದು ಎಲ್ಲರನ್ನೂ ಬೆರಗುಗೊಳಿಸುತ್ತಿದೆ. ಇನ್ನುಳಿದಂತೆ ಕಪ್ಪು ಬಣ್ಣದ ಟೊಪ್ಪಿಯಲ್ಲಿರುವ ಅತೀ ಸೂಕ್ಷ್ಮವಾದ ಡಿಸೈನ್ ಅದ್ಭುತವಾಗಿದೆ. ಮಳೆಗಾಲದ ಪ್ರಕೃತಿಯ ಸೌಂದರ್ಯ, ಬೆಡಗು ಬಿನ್ನಾಣ ಎಲ್ಲವೂ ಈ ಅಣಬೆಯಲ್ಲಿದೆ.

**-ಹುಕ್ಕಳ್ಳಿ ಗುರುನಾಥ ಹೆಗಡೆ, ಕಾನಸೂರು**

## ಭೃಂಗದಾ ಬೆನ್ನೇರಿ ಬಂತು..

ಕಲ್ಲು ಕಂಬದ ಹೂವಿನ ಚಿತ್ತಾರದ ಮೇಲೆ ಮಕರಂದ ಹೀರುತ್ತಿರುವಂತೆ ಕುಳಿತ ಈ ಬಣ್ಣದ ಚಿಟ್ಟೆಯ ಶಿಲ್ಪ ತೀರ್ಥಹಳ್ಳಿ ತಾಲ್ಲೂಕಿನ ಮೇಳಿಗೆಯಲ್ಲಿರುವ ವಿರಭದ್ರೇಶ್ವರಸ್ವಾಮಿ ದೇವಸ್ಥಾನದ ಕಂಬದ ಮೇಲಿದೆ. ಈ ದೇವಸ್ಥಾನದ ನಿರ್ಮಾತೃಗಳು ಮತ್ತು ನಿರ್ವಾಹಕರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಗೇರುಗಲ್ಲು ಕರಿಬಸಪ್ಪನವರ ಕುಟುಂಬದವರು.

**- ಕೆ.ಆರ್.ಉಮಾದೇವಿ ಉರಾಳ್,ತೀರ್ಥಹಳ್ಳಿ**

